50

ಪಂಡಿತನ ಪಿಟೀಲು

ಮತ್ತು

ಇತರ ಕಥೆಗಳು

★

ಕುಡ್ಪಿ ವಾಸುದೇವ ಶೆಣೈ
ಮಂಗಳೂರು.

1955.

ಕಥೆಗಳು: ೧. ಪಂಡಿತನ ಪಿಟೀಲು. ೨. ಕಳ್ಳಕತ್ತರಿ. ೩. ಹುಲ್ಲಿಸಿಂದ ಪತ್ತೆಮಾಡಲ್ಪಟ್ಟ ಹುಲುಕಳ್ಳ. ೪. ನಿಜವಾದ ಉತ್ತರಾಧಿಕಾರಿ. ೫. ಹಿಟ್ಟು ಕದ್ದವರಾರು. ೬. ಕುರುಡನ ಚಾತುರ್ಯ. ೭. ಋಣಸಂದಾಯ.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗ

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ಸಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ
ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತತ್ಯಾಗ ಮತ್ತು ಇತರ ಕಥೆಗಳು
೬. ಚುನಾವಣೆ ಅರ್ಥಾತ್ ಬನಾವಣೆ
(ಏಕಾಂಕ ಪ್ರಹಸನ)
೭. *'ಬೀಡಿ ಸೇದಬೇಡಿ' ಮತ್ತು 'ಅ ಮಗು'
(ವಿನೋದ ಕಥೆಗಳು)
೮. ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ದ್ವಿ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ.
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕೆರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. ತಿರುಕ್ಕುರಲ್
೨೩. ಸೂರ್ಯನ ಸಂಸಾರ
ಮತ್ತು ಇತರ ಕಥೆಗಳು.
೨೪. ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. *ಮಾರಾವತಾರ
(ಏಕಪಾತ್ರ ಯಕ್ಷಗಾನ ಪ್ರ
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಬಿ (ಏಕಾಂಕ ಪ್ರ
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧ ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಆಳುವಿಸ ಹೊಳೆ ಮತ್ತು
ಕೇಶವಭೂಪ (ಮಕ್ಕಳ ಕಥೆ
೩೫. ಶರಾಬಿನ ಸೀಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ
೪೦. ಆಭರಣಗಳ ಪೆಟ್ಟಿಗೆ ಇತರ ಕಥೆ
೪೧. ಭಾರತದ ಮಂತ್ರಿಮಂಡಲಗಳು
೪೨. ಕಾಲುಬಳೆಯ ಕಥೆ
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ
ಮತ್ತು ಇತರ ಕಥೆ
೪೫. ಸುಭಾಷಿತ
೪೬ ೧೮೫೭ರ "ಸಿಪಾಯಿ ದಂಗೆ" ಅಥ
ಬ್ರಿಟಿಷರಿಗೆದುರಾಗಿ ಭಾರತೀಯ
ಸ್ವಾತಂತ್ರ್ಯ
೪೭. ಅಕಾಂಡ ತಾಂಡವ (ರೇಡಿಯೋ ನಾ
೪೮. ಸಾಹಸದ ಕಥೆಗಳು.
೪೯. ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟೀಲು

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಐವತ್ತು ಪುಸ್ತಕಗಳಲ್ಲಿ, ಐವತ್ತು ಆಣೆಗಳಿಗೆ,
'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, 1194 ಪುಟಗಳನ್ನು ಕೊಟ್ಟಿರುತ್ತ

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರ

ಈ ಕಥೆಗಳ ಕುರಿತು ಎರಡು ಮಾತು

ಜಗತ್ತಿನಲ್ಲಿ ಹಲವು ಬಗೆಯ ವಂಚಕರಿರುವರು; ಕಳ್ಳರಿರುವರು; ಕೃಪಣರಿರುವರು. ಅವರಲ್ಲಿ ಒಬ್ಬೊಬ್ಬನ ಜೀವನದಲ್ಲಿನ ಘಟನೆಗಳನ್ನು ಎತ್ತಿ ಪ್ರತ್ಯೇಕಿಸಿದರೂ, ಸಾವಿರಾರು ಪುಟಗಳ ಮನೋರಂಜಕ ವಿಷಯ ಗಳು ದೊರೆಯಬಹುದು. ಅವರಿಗೆ ಸಂಬಂಧಿಸಿದ ಈ ಘಟನೆಗಳು ಮನೋ ರಂಜನೆಯನ್ನೊದಗಿಸುವಾಗ, ಲೋಕದಲ್ಲಿ ವಂಚಕರು ಎಷ್ಟೊಂದು ವಿಸ್ಮಯಕರ—ಚತುರ ರೀತಿಯಲ್ಲಿ ಹಣವನ್ನು ಅಪಹರಿಸುವರು ಮತ್ತು ಕೆಲವು ಜಾಣರು ಎಷ್ಟೊಂದು ಜಾಣ್ಮೆಯಿಂದ ತಪ್ಪಿಸಿಕೊಳ್ಳುವರು ಇಲ್ಲವೆ ಪತ್ತೆಮಾಡುವರು—ಎಂಬುದು ಕೌತುಕಪೂರ್ಣವಿದೆ. ಒಬ್ಬನು, ಎಷ್ಟೊಂದು ಜಾಗರೂಕತೆಯಿಂದ ವ್ಯವಹಾರಮಾಡಬೇಕೆಂಬುದನ್ನೂ ಇದು ಕಲಿಸು ತ್ತದೆ. ಇಸೋಫನೂ ಪಂಚತಂತ್ರದ ರಚಯಿತನೂ ಪಕ್ಷಿಗಳಿಗೂ ಚತು ಷ್ಪಾದ ಪ್ರಾಣಿಗಳಿಗೂ ಮನುಷ್ಯ ಭಾಷೆಯನ್ನು ಕೊಟ್ಟು, ಲೋಕದೊಳಗಿನ ನಾನಾತರದ ಜನರ ಮನೋವೃತ್ತಿ—ನೀಚತ್ವಗಳನ್ನು ಚಿತ್ರಿಸಿದರು. ಮನುಷ್ಯರೊಳಗೆ ನರಿಗಳಿರುವರು; ಸಿಂಹಗಳೂ ಇರುವುವು. ಇಲಿಗಳು—ಬಾವಲಿಗಳು—ವಿಷಸರ್ಪಗಳು—ಕಾಗೆಗಳು—ಕತ್ತೆಗಳು—ಹಸುಗಳು—ಇವೆಲ್ಲವನ್ನೂ ಮನುಷ್ಯರ ವರ್ತನೆಗಳಿಂದ ತುಲನೆಮಾಡಬರುವುದು.

ಈ ಕಥಾಸಂಗ್ರಹದಲ್ಲಿ ಸಾಮಾನ್ಯ ಒಂದೇ ವರ್ಗಕ್ಕೆ ಸೇರಿದ ಕೆಲವು ಸಣ್ಣ ಕಥೆಗಳನ್ನು ಸಂಗ್ರಹಿಸಿಕೊಡಲಾಗಿದೆ. ಇವುಗಳಲ್ಲಿ ಕೆಲವು ನಿಜವಾಗಿ ನಡೆದ ಘಟನೆಗಳೇ ಆಗಿವೆ. ಮತ್ತೆ ಕೆಲವು, ಸತ್ಯಕಥಾನಕಗಳೆಂದು ಹೆಕ್ಕಲ್ಪಟ್ಟಿದ್ದರೂ, ಅವುಗಳ ಪೂರ್ಣ ಸತ್ಯತೆಯ ಕುರಿತು ಅಧಿಕೃತವಾಗಿ ಹೇಳಲಾರೆವು. ಕಥಾನಕಗಳಲ್ಲಿ ಬಳಸಿದ ಭಾಷೆ ನಮ್ಮದು.

'ಪಂಡಿತನ ಪಿಟಲಿ'ನಲ್ಲಿ, ಇಬ್ಬರು ಕಳ್ಳರು, ಕನ್ನಕೊರೆಯುವ ಶ್ರಮ ವಿಲ್ಲದೆ, ಸಂಭಾವಿತರಂತೆ ನಡೆದು ಉಪಾಯದಿಂದ ಚಿಕ್ಕ ಮೊಬಲಗುಗಳ ನ್ನೆತ್ತಿಹಾಕುವುದನ್ನು ತೋರಿಸಲಾಗಿದೆ. 'ಹಿಟ್ಟುಕದ್ದವನ' ಸ್ವಭಾವವು ವಿನೋದವನ್ನೊದಗಿಸುತ್ತದೆ. 'ಕಳ್ಳಕತ್ತರಿ'ಯಲ್ಲಿ ಜಿದ್ದವನು, ತನ್ನ ಘನ ವೃತ್ತಿಗೇ ದ್ರೋಹವೆಸಗಿದ ನೀಚನಾಗಿದ್ದಾನೆ. 'ಋಣಸಂದಾಯ'ದಲ್ಲಿ, ಮಹಾ ಕೃಪಣನಿಗೆ ಶಾಸ್ತಿಯಾಯಿತೆಂದು ಓದುಗನು ಸಂತೋಷಪಡುವಾಗ

ಪಂಡಿತನ ಪಿಟಿಲು
ಮತ್ತು ಇತರ ಕಥೆಗಳು

---

೧. ಪಂಡಿತನ ಪಿಟಿಲು

ಸಣ್ಣಗೆ ಮಳೆ ಹನಿಯುತ್ತಿತ್ತು. ಬಡ್ಡಿಗೆ ಹಣಕೊಡುವ ಬಂಗಾರದ ವ್ಯಾಪಾರಿಯೊಬ್ಬನು, ತನ್ನ ಅಂಗಡಿಯಾಚೆಯವನು ಹಿಂದಿನ ದಿನ ಪಡೆ ಕೊಂಡ ವೃತ್ತಪತ್ರಿಕೆಯನ್ನು ಕೇಳಿತಂದು, ಓದಿಕುಳಿತಿದ್ದನು.

ಸರಾಫನು, ಬಂಗಾರ-ಬೆಳ್ಳಿ ಒಡವೆಗಳ ಅಡವಾನದ ಮೇಲೆ, ಸೇಕಡಾ ಹನ್ನೆರಡೂವರೆಯ ಬಡ್ಡಿಯ ಮೇಲೂ, ಕೈಗಡಿಯಾರ, ಚೆಂಬು ಚರಿಗೆಗಳ ಅಡವಾನದ ಮೇಲೆ ಸೇಕಡಾ ೧೮|||ರ ಬಡ್ಡಿಯಲ್ಲಿಯೂ, ಕೊಡೆ—ಫೌಂಟನ್‌ಪೆನ್—ಸೈಕಲುಗಳ ಅಡವಾನದ ಮೇಲೆ ಸೇಕಡಾ ೨೫ರ ಬಡ್ಡಿಯಲ್ಲಿಯೂ ಹಣವನ್ನು ಸಾಲ ಕೊಡುತಿದ್ದನು. ಒಂದು ವಾರದ ಗಡ್ಡದ ಬೆಳವಣಿಗೆಯ ಮುಖದ, ತೇಪೆಹಾಕಿದ ಅಂಗಿಯ, ಕೊಳಕು ಮುಂಡಾಸಿನ—ಸುಮಾರು ಐವತ್ತು ವರ್ಷ ಪ್ರಾಯದವನೊಬ್ಬನು ಆ ಸರಾಫನ ಮುಂದೆ ಬಂದು ನಿಂತು, ಶಕ್ತಿಹೀನ ಸ್ವರದಲ್ಲಿ, "ಈ ಪಿಟೀಲನ್ನು ಇಟ್ಟುಕೊಂಡು ನನಗೆ ಹತ್ತುರೂಪಾಯಿಗಳ ಸಾಲಕೊಡಬೇಕು ತಾವು!

—ಆ ಕೃಪಣನಿಗೆ ಗಂಟುಬಿದ್ದಂಥವನ ವಿಷಯ ತಾನೂ ಎಚ್ಚರಿಕೆಯಿಂದಿರ ಬೇಕೆಂಬ ಪಾಠವೂ ಇದೆ........ಹೀಗೆ ಒಂದೊಂದು ಕಥೆಯೂ ಒಂದೊಂದು ವಿಚಿತ್ರ ಕಳ್ಳತನದ ರೀತಿಯೊಡನೆ ವಿವಿಧ ಸ್ವಭಾವಗಳನ್ನು ವಿಶದೀಕರಿಸುತ್ತದೆ.

ಕಳ್ಳ-ಸುಳ್ಳರ ಕಥೆಗಳಾದರೂ ಅಪ್ರತ್ಯಕ್ಷವಾಗಿ ಕೂಡ ಓದುಗನ ಮನಸ್ಸಿನ ಮೇಲೆ ದುಷ್ಪರಿಣಾಮವುಂಟಾಗಬಾರದೆಂಬುದನ್ನು ತಿಳಿದು, ಜಾಗರೂಕತೆಯಿಂದ ಹೆಕ್ಕಿ ಕೊಟ್ಟಿರುವೆವು.

ಸಪ್ಟಂಬರ, 1955.

ಕುಡ್ಪಿ ವಾಸುದೇವ ಶೆಣೈ.

ತಂಜಾವೂರಿನಿಂದ ಬಂದೆ. ಸಂಗೀತ ಕಲಾಸೇವಕನು. ಕಥೆ ದೊಡ್ಡದಿದೆ- ಎಲ್ಲವನ್ನೂ ಹೇಳಲಾರೆ. ನಿನ್ನೆಯಿಂದ ಊಟಮಾಡಿಲ್ಲ. ಇಂದಿನಿಂದ ನಾಲ್ಕು ದಿನಗಳೊಳಗೆ ಹತ್ತುರೂಪಾಯಿಗಳನ್ನು ತಂದುಕೊಟ್ಟು ಈ ಪಿಟೀಲನ್ನು ಕೊಂಡುಹೋಗುತ್ತೇನೆ. ಸಂಗೀತ ವಿದ್ವಾಂಸನೊಬ್ಬನಿಗೆ ತಾವು ಮಾಡುವ ಉಪಕಾರ!—ನ್ಯಾಯವಾದ ಬಡ್ಡಿಯನ್ನು ಕೊಡಲು ಅಡ್ಡಿಯಿಲ್ಲ ...." ಎಂದನು.

ಸರಾಫನು ತನ್ನ ಮುಂದೆ ವಿನೀತನಾಗಿ ನಿಂತುಕೊಂಡಿದ್ದ ಸಂಗೀತಗಾರನನ್ನು ನೋಡಿದನು. ಅವನ ಪ್ರಕಾಶಹೀನ ಕಣ್ಣುಗಳನ್ನು ನೋಡಿದನು. ಹರಕುಬಟ್ಟೆ, ಗಡ್ಡಬೆಳೆದ ಮುಖ—ಹಣೆಯ ಮೇಲಿನ ನಾಮ— ಎಲ್ಲವನ್ನೂ ನೋಡಿದನು. ಪ್ರಾಯವನ್ನು ಅಂದಾಜುಹಾಕಿದನು. ಪಿಟೀಲು ಬಾರಿಸಿಯೇ ಸಿಕ್ಕಿದ ಹಣದಿಂದ ಜೀವನ ನಡೆಸುವ ಪ್ರಯಾಸದ ಚಿತ್ರವೂ ಅವನ ಮನಸ್ಸಿನಲ್ಲಿ ಕನಿಕರ ಹುಟ್ಟಿಸಿತು. ಬಂದವನನ್ನು ನಂಬಬೇಕೆಂದು ಅನಿಸಿತು. ಹತ್ತುರೂಪಾಯಿಗಳನ್ನು ತೆಗೆದಿರಿಸಿ, "ಇದಕ್ಕೆ ನೀನು ಕೇವಲ ಎಂಟಾಣೆ ಬಡ್ಡಿ ಕೂಡಿಸಿ ತಂದುಕೊಟ್ಟರೆ ಸಾಕು. ನಾಲ್ಕನೇ ದಿನ ದಾಟಿದ ಮೇಲೆ, ದಿನಕ್ಕೆ ಪ್ರತಿ ರೂಪಾಯಿಗೆ ಒಂದೊಂದಾಣೆ ಬಡ್ಡಿ ತೆರಬೇಕಾದೀತು!" ಎಂದು ಎಚ್ಚರಿಸಿ, ಪಿಟೀಲನ್ನು ತೆಗೆದುಕೊಂಡು ತೋರ್ಬೆರಳಿನಿಂದ ಸರಿಗೆಯ ಮೇಲೆ ಠುಯ್ಯೆಂದು ಧ್ವನಿ ತೆಗೆದು, ಹತ್ತು ರೂಪಾಯಿಗಳಿಗೂ ಕಡೆಯೇ ಎಂದು ತನ್ನೊಳಗೇ ತಾನು ಪ್ರಶ್ನಿಸಿ, "ಖಂಡಿತವಾಗಿಯೂ ಅಲ್ಲ'' ಎಂದು ತನಗೆ ತಾನೇ ಉತ್ತರಿಸಿ, ಪಿಟೀಲನ್ನು ತಾನು ಕುಳಿತಲ್ಲೆ ಮೇಲ್ಗಡೆ ತೂಗಹಾಕಿ, ಪುನಃ ದಿಂಬಿಗೆ ಒರಗಿ, ಎಪ್ಪತ್ತಾರು ಗಂಟೆಗಳ ಪೂರ್ವದ ವಾರ್ತೆಗಳಿರುವ ಇಪ್ಪತ್ತನಾಲ್ಕು ಗಂಟೆ ಪ್ರಾಯದ, ಕಡತಂದ ದಿನಪತ್ರಿಕೆಯನ್ನು ಪುನಃ ಓದುವುದರಲ್ಲಿ ಮಗ್ನನಾದನು. ಪಿಟೀಲುವಾದಕನು, ನಮಸ್ಕರಿಸಿ, ಮೆಲ್ಲನೆ ಹೆಜ್ಜೆಗಳನ್ನು ಇಡುತ್ತ ಹೊರಟುಹೋದನು.

ಇದಾದ ಎರಡು ದಿನಗಳಲ್ಲಿ, ಒಬ್ಬ ಗೃಹಸ್ಥನು ಆ ರಸ್ತೆಯಾಗಿ ಹೋಗುತ್ತ, ಸರಾಫನ ಅಂಗಡಿ ಬಳಿ ನಿಂತು, ಎದುರಿಗೆ ತೂಗಹಾಕಿದ್ದ ಪಿಟೀಲನ್ನೆ ನೋಡಹತ್ತಿದನು. ಸರಾಫನು ಈ ವ್ಯಕ್ತಿಯನ್ನು ಕರೆದು, "ಏನು ಬೇಕಾಗಿದೆ?" ಎಂದು ಪ್ರಶ್ನಿಸಲು, ಅಪರಿಚಿತನು ಚಿತ್ತೈಕಾಗ್ರತೆಗೆ

ಭಂಗವುಂಟಾದವನಂತೆ ನ್ಯೈದೆಗೆಯುತ್ತ, "ಏನಿಲ್ಲ—ಏನೂ ಇಲ್ಲ—ಆ ಪಿಟೀಲು!" ಎಂದನು.

"ಅಹುದು—ಪಿಟೀಲು! ಅದರಲ್ಲೇನು?"

"ಒಂದು ಕ್ಷಣ ನೋಡಲೋ ಸಾರ್?" ಆಗಂತುಕನು ವಿನೀತನಾಗಿ ಕೇಳಿದನು.

ಸರಾಫನು ಎದ್ದು, ಆ ಪಿಟೀಲನ್ನು ತೆಗೆದು ಆಗಂತುಕನ ಕೈಗಳಿಗೆ ಕೊಟ್ಟನು. ಅದನ್ನು ಒಂದರೆ ಕ್ಷಣ ನೋಡುತ್ತಲೇ, ಆಗಂತುಕನ ಕಣ್ಣು ಗಳು ಭಕ್ತಿಗೌರವಗಳಿಂದ ಹೊಳೆದುವು. ಅಸಾಧಾರಣ ಉದ್ರೇಕದ ಸ್ವರ ದಿಂದ ಆಗಂತುಕನು, "ಈ ಪಿಟೀಲು ತಮ್ಮಲ್ಲಿ ಹೇಗೆ ಬಂತು ಸಾರ್?" ಎಂದು, ವಿನಯ ಜೆರೆತೇ ಕೇಳಿದನು.

"ಒಬ್ಬ ಬಡಕಲು ಮನುಷ್ಯನು ಇದನ್ನು ತಂದುಕೊಟ್ಟು, ಹತ್ತು ರೂಪಾಯಿ ಕಡ ಇಸಕೊಂಡಿದ್ದಾನೆ. ಏಕ ಹಾಗೆ ಪ್ರಶ್ನಿಸಿದಿರಿ? ವಿಶೇಷ ವೇನು?"—ಸರಾಫನು ಪ್ರಶ್ನಿಸಿದನು.

"ಸುಮಾರು ೫೦-೫೫ ವರ್ಷ ಪ್ರಾಯದವನೇ? ಬಿಳಿಯ ಸಾಮುಖಿದೆ? —ಮೂಗು ಸ್ವಲ್ಪ ಕೊಕ್ಕು? ಕೆಂಪುಅಂಚಿನ ಮುಂಡಾಸು?............"

ಆಗಂತುಕನು ಇನ್ನೇನೇನೋ ಕೇಳಲಿದ್ದನು. ಸರಾಫನು ಅವನನ್ನು ತಡೆದು, "ಅಹುದಹುದು! ಏನು, ಕಳವಿನ ಮ್ಹಾಲೇ?" ಎಂದು ಆತುರ ದಿಂದ ಕೇಳಿದನು.

"ಅಲ್ಲ ಸಾರ್! ಇದು ಷಣ್ಮುಗಂ ಪಿಳ್ಳೆಯ ಪಿಟಲು! ಮುಂಡಾಸಿನ ವ್ಯಕ್ತಿಯೇ ಆ ಪ್ರಸಿದ್ಧ ಷಣ್ಮುಗಂ ಪಿಳ್ಳೆ!............ಹಾಯ್, ಭಗವಂತ! ಏನಿದು ವಿಧಿಯ ಲೀಲೆ! ಷಣ್ಮುಗಂ ಪಿಳ್ಳೆ—ಇಲ್ಲಿಗೆ ಬಂದು ಪಿಟೀಲನ್ನೂ ಇಸ್ಟೊಳ್ಳೆ............"

"ಷಣ್ಮುಗಂ ಪಿಳ್ಳೆ ಎಂದರೆ ಪಿಟೀಲು ವಿದ್ವಾಂಸನೇ? ಬಹಳ ಪ್ರಖ್ಯಾ ತನೇ........" ಸರಾಫನು ಕೇಳಿದನು.

"ಪ್ರಸಿದ್ಧ? ಈ ಪಿಳ್ಳೆಯನ್ನರಿಯದ ಪಿಳ್ಳೆಯೇ ದಕ್ಷಿಣ ಭಾರತದಲ್ಲಿಲ್ಲ. ಆ ಮನುಷ್ಯನ ಕೈಗೆ ಲಕ್ಷ ರೂಪಾಯಿ ಬೆಲೆ ಸಾರ್! ಪಿಟೀಲು ಬಾರಿಸಿದರೆ

ಬಂಡೆಕಲ್ಲೂ ಕರಗಿಸುತ್ತಾರೆ! ಕೇಳಿದ ಜನಾ ದಳದಳ ಕಣ್ಣೀರಿಳಿಸುತ್ತೆ! ಎಲ್ಲಿ ಹೋದರು ಸಾರ್ ಅವರು? ಈ ಊರಲ್ಲೆ ಇದ್ದಾರೇನು?"

"ಅಹುದು"—ಸರಾಫನಂದನು. "ಇಲ್ಲೆ ಇರಬೇಕು. ನಾಲ್ಕು ದಿನಗಳಲ್ಲಿ ಬರುವೆನೆಂದರು. ಎರಡು ದಿನ ಉಳಿದಿದೆ."

"ಹಾಗಾದರೆ ಸಾರ್, ಒಂದು ಕೆಲಸವಮಾಡಿಬಿಡಿ. ಈ ಪಿಟೀಲಿನ ಕ್ರಯ ಇನ್ನೂರೈವತ್ತು ರೂಪಾಯಿ! ನಿಮ್ಮಿಂದ ಕೊಂಡುಹೋಗಿ ಇನ್ನೊಬ್ಬನಿಗೆ ಪುಗಸಾಟೆಗೆ ಕೊಟ್ಟುಬಿಡುವ ಸಂಭವವಿದೆ—ಆ ಕುಡಿಕ ಪ್ರಾಣಿ."

"ಕುಡುಕನೇ?"

"ಅನ್ನ ಸೇರೋದಿಲ್ಲ ಸಾರ್ ಆ ಪ್ರಾಣಿಗೆ! ಹಣ ಇದ್ದರೆ, ಇಪ್ಪತ್ತನಾಲ್ಕು ತಾಸೂ ಕುಡಿಯೋದು! ನೋಡಿ ಸಾರ್, ಆ ಜನ ಬಹಳ ಅಡಚಣೆಯ ಜನ. ಅವರು ಬಂದರೆ, ನೂರು ರೂಪಾಯಿಗೆ ಖರೀದಿಮಾಡಿ ಬಿಡಿ ಸಾರ್ ಆ ಪೀಟಿಲನ್ನು......"

"ನೂರು ರೂಪಾಯಿಗೆ ಬಿಟ್ಟು ಚಿಕ್ಕಾಸಿಗೆ ದೊರೆತರೂ, ನನ್ನಂಥವನಿಗೇನು ಪ್ರಯೋಜನ ಈ ವಸ್ತು?"—ಸರಾಫನು ಪ್ರಶ್ನಿಸಿದನು.

"ಹಾಗಲ್ಲ ಸಾರ್! ಆ ಜನ ಬಂದಾಗ, ತಾವು ಕೊಂಡುಕೊಳ್ಳಿರಿ ಸಾರ್! ಅದು ನನಗೇ ಬೇಕು. ನಾನೇ ತಮ್ಮೊಡನೆ ೧೦೫ ರೂಪಾಯಿಗೆ ಕೊಂಡುಕೊಳ್ಳುತ್ತೇನೆ. ತಗೊಳ್ಳಿ ಈ ಹತ್ತುರೂಪಾಯಿ ಮುಂಗಡ! ಪಿಟೀಲು ಸಿಕ್ಕಿದರೆ ಇನ್ನು ತಮಗೆ ೯೫ ರೂಪಾಯಿ ಕೊಡುತ್ತೇನೆ. ಇಲ್ಲ ಎಂದರೆ ನನ್ನ ಹಣ ನನಗೆ ವಾಪಾಸ್ ಕೊಟ್ಟುಬಿಟ್ಟರಾಯಿತು."

ಸರಾಫನು, ಪಿಟೀಲುವಾದನ ಪ್ರವೀಣ ಷಣ್ಮುಗ ಪಿಳ್ಳೆಯು ಇನ್ನೆರಡು ದಿನಗಳಲ್ಲಿ ತೆರುವ ಎಂಟಾಣೆ ಬಡ್ಡಿಗಿಂತ ಈ ಐದು ರೂಪಾಯಿ ನಿಜಕ್ಕೂ ಅಪೇಕ್ಷಣೀಯ—ಹತ್ತು ರೂಪಾಯಿಗೆ ಐದೇ ರೂಪಾಯಿ ಬಡ್ಡಿ ಸಿಕ್ಕಿದಂತಾಯಿತು ಎಂದು ಗ್ರಹಿಸಿ, ಆಗಂತುಕನ ಮಾತಿಗೊಪ್ಪಿ ಹತ್ತುರೂಪಾಯಿಗಳನ್ನು ತೆಗೆದುಕೊಂಡನು. ಆಗಂತುಕನು, ಮೂರನೇ ದಿನ ಸಾಯಂಕಾಲ ಬರುವೆನೆಂದು ಹೇಳಿ, ನಮಸ್ಕಾರವಿತ್ತು ಹೊರಟುಹೋದನು.

ವಚನಕೊಟ್ಟ ದಿನವೇ, ದಕ್ಷಿಣ ಭಾರತ ಖ್ಯಾತಿಯ ಷಣ್ಮುಗಂ ಪಿಳ್ಳೆ ಬಂದು, ಹತ್ತೂವರೆ ರೂಪಾಯಿಗಳನ್ನು ಮುಂದಿರಿಸಿ, ತನ್ನ ಪಿಟೀಲು

ಕೊಡುವಂತೆ ವಿನಂತಿಸಿದನು. ಸರಾಫನು ತೊದಲುತ್ತ ತೊದಲುತ್ತ— ಖರೀದಿ ಪ್ರಶ್ನೆಯನ್ನು ಅವನ ಮುಂದೆ ಮಂಡಿಸಿದನು. ಪಿಳ್ಳೈ, ಚಿಂತೆಯ ಮುಗುಳ್ನಗೆಯಿಂದ, "ಸಾಧ್ಯವಿಲ್ಲ"ವೆಂದು ತಲೆಯಲ್ಲಾಡಿಸಿದನು. ಸರಾಫನು, ಆತುರ ಹೆಚ್ಚಿ, ತನ್ನ ವಾಕ್ಸಾಮರ್ಥ್ಯವೆಲ್ಲವನ್ನೂ ವ್ಯಯಿಸಿ, ಕೊನೆಗೆ, "ನಿಮ್ಮಂಥ ವಿದ್ವಾಂಸರಿಗೆ ಇನ್ನೊಂದು ಪಿಟೀಲನ್ನು ಹೇಗೂ ಪಡೆದುಕೊಂಡು ದೈವಿಕ ನಾದವನ್ನು ಹೊರಡಿಸಲು ಸಾಧ್ಯವಿದೆ" ಎಂದು ಸಮಾಧಾನ ಹೇಳಿದನು; ಮತ್ತು ತೊಂಭತ್ತು ರೂಪಾಯಿಗಳನ್ನು ಮುಂದೆ ಸುರುವಿದನು. ಸಂಗೀತ ಕಲಾನಿಧಿ ಪಿಳ್ಳೈಗೆ ಈ ಬೆಳ್ಳಿಯ ನಿಧಿ ನೋಡುತ್ತಲೇ, ಪಿಟಲಿಗಿಂತ ಇದರಲ್ಲೆ ಅಧಿಕ ರಮ್ಯ ಸಂಗೀತವು ಕೇಳಿಸಿ, ಹೇಗೂ ಒಪ್ಪಿ, ಆ ತೊಂಭತ್ತು ರೂಪಾಯಿಗಳನ್ನೂ, ತಾನು ಸಾಲ ಮರುಪಾವತಿಗೆ ತಂದಿದ್ದ ಹಣದಲ್ಲಿ ಐದೂವರೆ ರೂಪಾಯಿಗಳನ್ನೂ ಕಿಸೆಗೆ ಹಾಕಿ, ದುಃಖದಿಂದ ಪುನಃ ನಕ್ಕು, ಭಾರವಾದ ಹೆಜ್ಜೆಗಳನ್ನಿಡುತ್ತ ಹೋದನು. ಸರಾಫನು ತನ್ನ ಮೂಗನ್ನೊಮ್ಮೆ ಉಜ್ಜಿ, ಸುಸ್ಥಿತಿಯಲ್ಲಿ ಕುಳಿತನು.

○ ○ ○ ○ ○ ○ ○ ○

ಮೂರು ದಿನಗಳಾದುವು–ಒಂದು ವಾರವಾಯಿತು; 'ಪಿಳ್ಳೈ ಪಿಟೀಲ'ನ್ನು ಮೆಚ್ಚಿ, ಹತ್ತು ರೂಪಾಯಿ ಮುಂಗಡ ಕೊಟ್ಟು ತೆರಳಿದ ಆಸಾಮಿಯ ಸುಳಿವೇ ಇಲ್ಲ. ಎಂಟನೇ ದಿನದಲ್ಲಿ, ಸರಾಫನ ಸಂದೇಹ ಬಲವಾಗಿ, ಪಿಟೀಲನ್ನು ಸ್ಥಳೀಯ ಸಂಗೀತೋಪಕರಣಗಳ ಅಂಗಡಿಗೆ, ಮೌಲ್ಯ ನಿರ್ಣಯಕ್ಕಾಗಿ ಕಳಿಸಿದಾಗ, ಈ ಹಳೇ ಪಿಟೀಲಿನ ದುರಸ್ತಿಗೆ ಮೂವತ್ತು ರೂಪಾಯಿಗಳಾಗುವುವೆಂದೂ, ಆ ಪಿಟೀಲನ್ನು ಇದ್ದಕ್ಕಿದ್ದಂತೇ ಮಾರಾಟಮಾಡುವುದಾದರೆ ಏಳೂವರೆ ರೂಪಾಯಿ ಕೊಡಬಹುದೆಂದೂ ಉತ್ತರ ಸಿಕ್ಕಿತು!

■■■■■■■■■

೨. ಕಳ್ಳಕತ್ತರಿ

ಓರ್ವ ಕೃಷೀವಲ ಸದ್ಗೃಹಸ್ಥನು, ನಗರದ ಹೊರಪಾರ್ಶ್ವದಲ್ಲಿ ಒಂದು ಹಣ್ಣಿನ ತೋಟವನ್ನು ರಚಿಸಿದನು.

ಹಣ್ಣುಗಳು ಹುಟ್ಟುವ ವರೆಗೆ ತೋಟವು ಸುರಕ್ಷಿತವಾಗಿಯೇ ಇತ್ತು. ಹಣ್ಣುಗಳು ಗಿಡಗಳಲ್ಲಿ ಕಾಣತೊಡಗುತ್ತಲೇ, ತೋಟದಲ್ಲಿ ಆಗಾಗ ಕಳವುಗಳಾಗತೊಡಗಿದುವು.

ಗೃಹಸ್ಥನು, ತೋಟದ ಕಾವಲಿಗೆ ಒಬ್ಬನನ್ನು ನೇಮಿಸಿದನು. ಆದರೆ, ಹಲವು ಎಕ್ರೆಗಳ ವಿಸ್ತೀರ್ಣದ ಆ ತೋಟದಲ್ಲಿ, ಒಬ್ಬ ಕಾವಲಗಾರನಿಂದ ಕಳ್ಳತನವನ್ನು ತಡೆಯಲಾಗಲಿಲ್ಲ.

ಗೃಹಸ್ಥನು ಯೋಚನೆಗೀಡಾದನು. ಕೊನೆಗೆ ಒಂದು ಉಪಾಯವು ಹೊಳೆಯಿತು. ಮನುಷ್ಯನು ಸಿಕ್ಕಿಬೀಳುವಂಥ–ಸಿಕ್ಕಿಕೊಂಡರೆ ಬಿಡಿಸಲಾರದಂಥ ಪರಂತು ಜೀವಕ್ಕೆ ಹಾನಿಯುಂಟುಮಾಡಲಾರದಂಥ–ಒಂದು ದೊಡ್ಡ ಕತ್ತರಿಯನ್ನು ತಯಾರಿಸಬೇಕೆಂದು ನಿಶ್ಚಯಿಸಿದನು. ಕಮ್ಮಾರನ ಹಾಗೂ ಬಡಗಿಯ ಕೆಲಸವರಿತ, ಆ ಪ್ರದೇಶದ ಒಬ್ಬ ಚತುರ ಕೆಲಸಗಾರನನ್ನು ಗೊತ್ತುಹಚ್ಚಿ, ಒಂದು ಕತ್ತರಿ ತಯಾರಿಸಲು ಹೇಳಿದನು.

ಕತ್ತರಿ ತಯಾರಾಯಿತು. ಯಾರಿಗೂ ಅರಿಯದಂತೆ ಆ ಕತ್ತರಿಯು ತೋಟದೊಳಗೆ ತರಲ್ಪಟ್ಟಿತು. ಗೃಹಸ್ಥನೂ, ತೋಟದ ಕಾವಲುಗಾರನೂ, ಕಮ್ಮಾರನೂ ಸೇರಿಕೊಂಡು ಆಲೋಚಿಸಿ, ಕೊನೆಗೆ ಒಂದು ಗಿಡದ ಬಳಿ ಅದನ್ನು ಇರಿಸಿದರು. ಸಾಹುಕಾರನು, ಮನೆಗೆ ಹೊರಟುಹೋದನು.

ಆದರೆ, ರಾತ್ರೆ ಎಂಟು ಗಂಟೆಯಾಗಬೇಕಾದರೆ, ಅವನಿಗೆ ಆ ಗಿಡದ ಬಳಿ ಕತ್ತರಿಯಿರುವುದಕ್ಕಿಂತ, ತಾನು ಮೆಚ್ಚುವ, ಹೇರಳ ಫಲಕೊಡುವ ಪೇರಳೆಹಣ್ಣಿನ ಒಂದು ದೊಡ್ಡ ಗಿಡದ ಬಳಿ ಆ ಕತ್ತರಿಯಿರಿಸಬೇಕಿತ್ತೆಂದು ಕಂಡಿತು. ಆ ಗಿಡದಲ್ಲಿ ತುಂಬ ಹಣ್ಣು ಹೊರಟಿದ್ದು, ಪಕ್ವವಾಗತೊಡಗಿದ್ದುವು. ಗೃಹಸ್ಥನು, ಕೂಡಲೇ ತನ್ನ ತೋಟದ ಕಡೆಗೆ ಬಂದನು; ಮತ್ತು, ಕಾವಲುಗಾರನಿಗೆ ತಿಳಿಯದಂತೆ ಹಿಂಬದಿಯಿಂದ ಹೋಗಿ, ಆ ಕತ್ತರಿಯನ್ನು ತಾನೊಬ್ಬನೇ ಅತಿ ಶ್ರಮದಿಂದ ಒಯ್ದು, ಪೇರಳೆಗಿಡದ ಬಳಿಯಿರಿಸಿ, ಮನೆಗೆ ಹೋದನು.

ಅವನಿಗೆ ರಾತ್ರಿಯಿಡೀ ಕಣ್ಣಿಗೆ ಕಣ್ಣು ಹತ್ತಲಿಲ್ಲ. ಮುಂಜಾನೆ ಎದ್ದು, ಬೆಳಕು ಹರಿಯಬೇಕಾದರೆ ತೋಟದ ಕಡೆಗೆ ಬಂದು, ನೇರಾಗಿ ಆ ಪೇರಳೆಗಿಡದ ಬಳಿಗೆ ಹೋದನು.

ಕತ್ತರಿ ತಯಾರಿಸಿದ ಕಮ್ಮಾರನು, ತನ್ನ ಕತ್ತರಿಯಲ್ಲಿ ತಾನೇ ಬಿದ್ದು, ಪೆಚ್ಚುಮೋರೆಯಿಂದ ನೋಡುತಿದ್ದನು!

■■■■■■■■■

೩. ಹುಲ್ಲಿನಿಂದ ಪತ್ತೆಮಾಡಲ್ಪಟ್ಟ ಹುಲುಕಳ್ಳ

ಕಳ್ಳನ ಪತ್ತೆಯಲ್ಲಿ, ಸೇನಾಧಿಕಾರಿಯೊಬ್ಬನು ಹೂಡಿದ ಒಂದು ವಿನೋದಕರ ಉಪಾಯದ ಕಥೆಯೊಂದು ಇದೆ.

ಫ್ರಾನ್ಸಿನ ಒಂದು ಕಡೆಯಲ್ಲಿ ಒಂದು ಚಿಕ್ಕ ಪಡೆಯು, ಮೊಕ್ಕಾಂ ಮಾಡಿದ್ದಾಗ ಆ ಘಟನೆ ನಡೆಯಿತು. ಶಿಬಿರದಲ್ಲಿ ಆಗಾಗ್ಗೆ ಕಳವುಗಳಾಗುತಿದ್ದುವು. ಉಗ್ರಾಣದಿಂದ ಕೆಲವು ವಸ್ತುಗಳು ಈ ದಿನ ಕಾಣೆಯಾದರೆ, ನಾಳೆ ಒಂದು ಢೇರೆಯೊಳಗೆ; ನಾಡದು ಇನ್ನೊಂದು ಢೇರೆಯೊಳಗೆ ಚಿಕ್ಕಪುಟ್ಟ ವಸ್ತುಗಳು ಕದಿಯಲ್ಪಡುತಿದ್ದುವು. ರಾತ್ರಿಕಾಲದ ಪಹರೆಯಿದ್ದರೂ ಈ ಕಳವುಗಳನ್ನು ಪತ್ತೆಹಚ್ಚುವುದು ಪ್ರಯಾಸಕರವಾಯಿತು.

ಈ ಕೃತ್ಯಗಳು ಹೊರಗಿನಿಂದ ಬರುವವರಿಂದ ನಡೆಯುತ್ತಿರದೆ, ಸೈನಿಕರೊಳಗೇ ಯಾವನೋ ಕಳ್ಳನಿದ್ದು—ಅವನಿಂದ ನಡೆಯುತ್ತಿರಬೇಕೆಂದು ಸೇನಾಧಿಕಾರಿಗೆ ಅನಿಸಿತು. ಅವನು ಒಂದು ಉಪಾಯವನ್ನು ಯೋಚಿಸಿದನು.

ಮರುದಿನ, ವಿರಾಮಕಾಲದಲ್ಲಿ, ಅವನು, ಪಡೆಯವರನ್ನೆಲ್ಲ ತಾನು ಇದ್ದಲ್ಲಿಗೆ ಕರೆಸಿದನು. ಮತ್ತು ವಿನೋದಕರ ಆಟವೆಂಬಂತೆ ನಟಿಸಿ, ಅವರ ಮುಂದೆ, ಅವರೆಷ್ಟು ಮಂದಿ ಇರುವರೋ ಅಷ್ಟೆ ಸಂಖ್ಯೆಯಲ್ಲಿ ಹುಲ್ಲುಕಡ್ಡಿಗಳನ್ನಿರಿಸಿ, "ಇಲ್ಲಿ ನೋಡಿ! ಪ್ರತಿಯೊಬ್ಬನೂ ಒಂದೊಂದರಂತೆ ಹುಲ್ಲುಕಡ್ಡಿ ಎತ್ತಿಕೊಳ್ಳಬೇಕು" ಎಂದನು.

ಎಲ್ಲರೂ ಒಂದೊಂದು ಕಡ್ಡಿ ಎತ್ತಿಕೊಂಡರು. ಆ ಮೇಲೆ ಅಧಿಕಾರಿಯು, "ಆ ಕಡ್ಡಿಗಳನ್ನು ಕೈಯಲ್ಲಿ ಹಿಡಿದುಕೊಂಡು, ಹಿಂದಿರುಗಿ ನಿಂತು, ಆ ಇನ್ನೊಂದು ಢೇರೆಗೆ ಬನ್ನಿ; ಆ ಹುಲ್ಲುಕಡ್ಡಿಗಳಲ್ಲಿ ಒಂದು ಕಡ್ಡಿಯು ಇತರ ಎಲ್ಲ ಕಡ್ಡಿಗಳಿಗಿಂತ ದೊಡ್ಡದಿದೆ. ಆ ಅತಿದೊಡ್ಡ ಕಡ್ಡಿಯು ಯಾರ ಕೈಸೇರಿರುವುದೋ ಅವನೇ ಈ ಶಿಬಿರದಲ್ಲಿನ ಕಳ್ಳ ಎಂಬುದಾಗಿ ನನಗೆ ನಿನ್ನೆ

ಕನಸುಬಿದ್ದಿದೆ. ಆ ಕನಸಿನ ನಿಜತ್ವವನ್ನು ನೋಡೋಣ''—ಎಂದು ವಿನೋದಕರವಾಗಿಯೇ ನುಡಿದು, ತಾನು ಢೇರೆಗೆ ಹೋಗಿ ಕುಳಿತನು.

ಎಲ್ಲರೂ, ತಾವು ತೆಗೆದುಕೊಂಡಿದ್ದ ಕಡ್ಡಿಗಳನ್ನು ಹಿಡಿದುಕೊಂಡು ಕೂಡಲೇ ಢೇರೆಗೆ ಬಂದರು. ಕಡ್ಡಿಗಳನ್ನು ಅಧಿಕಾರಿಯು ಕೈಗೆ ತೆಗೆದು ಕೊಳ್ಳುತ್ತ ನೋಡುತ್ತಿರಲು, ಒಬ್ಬನು ಕೊಟ್ಟ ಕಡ್ಡಿಯು ಒಂದಂಗುಲ ಗಿಡ್ಡವಿತ್ತು.

ಅಧಿಕಾರಿಯು ಅವರಿಗೆ ಎತ್ತಿಕೊಳ್ಳಲು ಹೇಳಿದ್ದ ಎಲ್ಲ ಕಡ್ಡಿಗಳೂ ಒಂದೇ ಅಳತೆಯವಾಗಿದ್ದುವು!

ಆ ಒಂದು ಕಡ್ಡಿ ಮಾತ್ರ ಗಿಡ್ಡವಿತ್ತು. ಅದನ್ನು ಕೊಟ್ಟ ಸೈನಿಕನು, ಹಲ್ಲಿನಿಂದ ಕಚ್ಚಿ ಒಂದಂಗುಲ ಕಡಿಮೆಮಾಡಿದ್ದನು!

ಅವನಿಗೆ ಶಿಕ್ಷೆ ವಿಧಿಸಲ್ಪಟ್ಟಿತು.

----

೪. ನಿಜವಾದ ಉತ್ತರಾಧಿಕಾರಿ

ವಿಕ್ರಮಾದಿತ್ಯನ ಕಾಲದಲ್ಲೂ, ತೇನಾಲಿ ರಾಮನ ಕಾಲದಲ್ಲೂ, ವಿಚಿತ್ರತರದಲ್ಲಿ ಕಳ್ಳ-ಸುಳ್ಳರನ್ನು ಗುರುತಿಸಿ ಶಿಕ್ಷಿಸಿದ ಕಥೆಗಳನ್ನೋದಿದ್ದೇವೆ. ಅಂಥ ಕಥೆಗಳು ಆಗಾಗ್ಗೆ, ಇತರ ಕಾಲಗಳಲ್ಲೂ ನಡೆದುಹೋಗಿವೆ.

ಸುಮಾರು ಇನ್ನೂರು ವರ್ಷಗಳ ಹಿಂದೆ, ಶ್ರೀಮಂತ ಸಾಹುಕಾರನೊಬ್ಬನು, ಹೇರಳ ಆಸ್ತಿಯನ್ನು ಬಿಟ್ಟು, ಪರಂಧಾಮವನ್ನೈದಿದನು. ಅವನಿಗೆ ಒಬ್ಬನೇ ಮಗನು. ಆ ಮಗನನ್ನು ಸಾಹುಕಾರನು, ಸಾಯುವ ಹಲವು ವರ್ಷಗಳ ಹಿಂದೆ, ವ್ಯಾಪಾರಕ್ಕಾಗಿ ಹಡಗದಲ್ಲಿ ಕಳಿಸಿದ್ದನು. ಹಡಗು ನೀರುಪಾಲಾಗಿ, ಆ ತರುಣನು ಎಲ್ಲಿಗೆ ಒಯ್ಯಲ್ಪಟ್ಟನೋ ಅಥವಾ ಜಲಸಮಾಧಿಹೊಂದಿದನೋ-ಒಂದೂ ವಿಷಯವೂ ಸ್ಪಷ್ಟವಾಗಲಿಲ್ಲ. ಅನೇಕ ವರ್ಷಗಳು ಕಳೆದ ನಂತರ, ಎಲ್ಲರೂ, ಅವನು ಸಮುದ್ರಕ್ಕೆ ಬಿದ್ದು ಕಾಲವಾದನೆಂದೇ ತೀರ್ಮಾನಿಸಿದರು.

ಆ ಸಾಹುಕಾರನು ಮಾತ್ರ,—ಪುತ್ರಪ್ರೇಮದಿಂದಲೋ ಏನೋ,—ತನ್ನ ಮಗನು ಸತ್ತ ಸುದ್ದಿಯನ್ನು ಸ್ಪಷ್ಟವಾಗಿ ಯಾರೂ ತಂದಿಲ್ಲದ ಕಾರಣ,

ಅವನೆಲ್ಲಿಯೋ ಬದುಕಿರಬೇಕೆಂದೇ ತನ್ನ ನಂಬಿಕೆಯಿದೆ ಅನ್ನುತಿದ್ದನು. ಪುತ್ರನ ನಷ್ಟವನ್ನು, ವ್ಯಾಮೋಹದಿಂದ ಒಪ್ಪಲಾರದೆ, ಈ ಸಾಹುಕಾರನು ಆಶೆಯಿಂದ ಹಾಗೆ ಭರವಸೆಪಟ್ಟು, ತನ್ನನ್ನು ತಾನೇ ಸಮಾಧಾನಪಡಿಸಿಕೊಳ್ಳುವನೆಂದು ಜನರನ್ನುತಿದ್ದರು.

ಸಾಹುಕಾರನು, ತನಗೆ ಮರಣ ಸಮೀಪಿಸಿದೆಯೆಂದು ತಿಳಿಯುತ್ತಲೇ, ತನ್ನ ಅತ್ಯಂತ ವಿಶ್ವಾಸೀ ಮಿತ್ರನೊಬ್ಬನನ್ನು ಬಳಿಗೆ ಕರೆಸಿ, "ನನ್ನ ಮಗನು ಬದುಕಿರುವನೆಂದೇ ನನ್ನ ವಿಶ್ವಾಸವಿದೆ. ಅವನು ಒಂದು ದಿನ ಹಿಂದಿರುಗಿ ಬರುವುದು ಖಂಡಿತ. ಆದರೆ, ಅವನ ಮುಖವನ್ನು ನೋಡುವ ಭಾಗ್ಯವು ಮಾತ್ರ ನನಗಿಲ್ಲ. ದೈವೇಚ್ಛೆ! ಅವನು ಬಂದಾಗ, ನನ್ನ ಎಲ್ಲ ಚರ-ಸ್ಥಿರ ಸೊತ್ತುಗಳನ್ನು ಅವನಿಗೆ ನೀನು ಒಪ್ಪಿಸಿಕೊಡಬೇಕು--" ಎನ್ನುತ್ತ, ಎಲ್ಲವನ್ನೂ ಆ ಮಿತ್ರನ ಮೇಲ್ವಿಚಾರಕ್ಕೆ ಬಿಟ್ಟು, ಕಣ್ಣು ಮುಚ್ಚಿದನು.

ಇದಾದ ಕೆಲವೇ ತಿಂಗಳುಗಳಲ್ಲಿ, ಆ ಮಿತ್ರನ ಬಳಿಗೆ ಒಬ್ಬನು ಬಂದು, ತಾನೇ--ಬಹುವರ್ಷಗಳಿಂದ ಕಾಣೆಯಾಗಿದ್ದ ಆ ಮೃತಸಾಹುಕಾರನ ಮಗನು ಎಂದು ಹೇಳಿ, ಆಸ್ತಿಪಾಸ್ತಿಗಳನ್ನು ಬಿಟ್ಟುಕೊಡುವಂತೆ ಕೇಳಿದನು. ಮಿತ್ರನು, ಕೂಡಲೇ ಎಲ್ಲವನ್ನೂ ಒಪ್ಪದೆ, ಸ್ವಲ್ಪ ಸಂದೇಹ ತಾಳಿ, ಕೆಲಕಾಲದೊಳಗೆ ತೀರ್ಮಾನಿಸುವೆನೆಂದು ವಚನವಿತ್ತನು.

ಮತ್ತೆ ಕೆಲದಿನಗಳಲ್ಲಿ ಎರಡನೆಯವನೊಬ್ಬನು ಬಂದು, ಕಾಣೆಯಾಗಿದ್ದ ಮಗನು ತಾನೇ ಎಂದು, ಬಾಧ್ಯತೆಯನ್ನು ಸ್ಥಾಪಿಸಲೆತ್ನಿಸಿದನು. ಆ ಮೃತಸಾಹುಕಾರನ ಮಿತ್ರನಿಗೆ ಚೋದ್ಯವೆನಿಸಿತು. ಮೃತನಿಗೆ ಒಬ್ಬನೇ ಮಗನಿದ್ದುದನ್ನು ಅವನು ತಿಳಿದಿದ್ದನು. ಈಗ ಎರಡನೆಯವನೊಬ್ಬನು ಬಂದಿರುವನು!—ಮಿತ್ರನು, ಇವನಿಗೂ ಕೆಲವು ದಿನ ತಾಳು ಎಂದನು.

ಇನ್ನೂ ವಿಚಿತ್ರ! ಒಂದೆರಡು ವಾರಗಳೊಳಗೆ ಮೂರನೆಯವನೊಬ್ಬನು ಬಂದನು! ತಾನೇ ನಿಜವಾದ ಬಾಧ್ಯಸ್ಥನೆಂದನು.

ಮಿತ್ರನಿಗೆ ಪೇಚಾಟವಾಯಿತು. ಈ ಮೂವರೊಳಗೆ ಒಬ್ಬನು ಮಾತ್ರ ನಿಜವಾದ ಮಗನಿರಬೇಕು. ಆದರೆ, ಯಾರು? ಅವನು ಒಂದು ಪರೀಕ್ಷೆಯನ್ನೇರ್ಪಡಿಸಿದನು.

ಮೃತಸಾಹುಕಾರನ ಒಂದು ಭಾವಚಿತ್ರವು ತರಿಸಲ್ಪಟ್ಟಿತು. ಅವರ ಮುಂದೆ ಆ ಚಿತ್ರವನ್ನಿರಿಸಿ, ಆ ಮಿತ್ರನು, ಮೂವರನ್ನೂ ಉದ್ದೇಶಿಸಿ, "ಆ

ಸಾಹುಕಾರನ ಮಗನು ಚಿಕ್ಕಪ್ರಾಯದಿಂದಲೇ ಬಿಲ್ಲುವಿದ್ಯೆಯಲ್ಲಿ ನಿಪುಣ ನಿದ್ದನು ಎಂದು ಕೇಳಿದ್ದೇನೆ. ನಿಮ್ಮಲ್ಲಿ ಯಾವನು, ಬಿಲ್ಲನ್ನೆತ್ತಿ ಈ ಭಾವ ಚಿತ್ರದ ಹೃದಯಕ್ಕೇ ಸರಿಯಾಗಿ ನಾಟುವಂತೆ ಬಾಣಹೊಡೆವನೋ ಅವನೇ ನನ್ನ ಆ ದಿವಂಗತ ಮಿತ್ರನ ನಿಜವಾದ ಪುತ್ರನು ಎಂದು ತೀರ್ಮಾನಿಸಿ, ಅವನಿಗೇ ಈ ಎಲ್ಲ ಸೊತ್ತುಗಳನ್ನು ಈ ಕ್ಷಣಕ್ಕೇ ಒಪ್ಪಿಸಿಬಿಡುವೆನು"— ಎಂದನು.

ಬಿಲ್ಲು—ಬಾಣಗಳನ್ನು ತರಿಸಲಾಯಿತು.

ಆ ಮೂವರಲ್ಲಿ ಒಬ್ಬನು, ಸಂಕೋಚಪಡದೆ ತಟ್ಟನೆ ಮುಂದರಿದು, ಬಿಲ್ಲುಬಾಣಗಳನ್ನೆತ್ತಿ, ಗುರಿಯಿಟ್ಟು ಹೊಡೆದನು. ಬಾಣವು ಕಣ್ಣಿಗೆ ತಗಲಿತು.

ಎರಡನೆಯವನು ಎದುರಿಗೆ ಬಂದು, ಬಾಣ ಹೊಡೆಯಲು, ಅದು ಹೃದಯಕ್ಕೆ ಸಮೀಪದಲ್ಲೆ ಹೋಗಿ ನಾಟಿ ಕುಳಿತಿತು.

ಮೂರನೆಯವನು ಮುಂದಾಗಲಿಲ್ಲ. ಮೃತಸಾಹುಕಾರನ ಮಿತ್ರನು ಈ ಮೂರನೆಯವನನ್ನೂ ಮುಂದೆ ಬರಲು ಆಹ್ವಾನಿಸಿದನು. ಆದರೆ, ಅವನು ಕದಲದೆ ನಿಂತಲ್ಲಿಂದಲೇ, "ನನಗೆ ಅಪ್ಪನ ಆಸ್ತಿಪಾಸ್ತಿಗಳು ದೊರೆ ಯದಿದ್ದರೂ ಚಿಂತೆಯಿಲ್ಲ. ಪೂಜ್ಯಪಿತನ ಭಾವಚಿತ್ರಕ್ಕೆ ಬಾಣಹೊಡೆದು ಅದಕ್ಕೆ ಅಗೌರವವನ್ನುಂಟುಮಾಡಲಾರೆ!'' ಎಂದನು. ಅವನ ಕಣ್ಣು ಗಳಿಂದ ಧಾರಾಕಾರವಾಗಿ ಅಶ್ರುಗಳುದುರುತಿದ್ದುವು.

ಮೃತ ಶ್ರೀಮಂತನ ಮಿತ್ರನು ತಟ್ಟನೆ ಮುಂದರಿದು, ಆ ತರುಣನನ್ನು ತಬ್ಬಿಕೊಂಡು, ''ಮಗೂ, ನಾನು ತೃಪ್ತನಾದೆ. ನೀನೇ ನನ್ನ ದಿವಂಗತ ಮಿತ್ರನ ಪುತ್ರನು!'' ಎನ್ನುತ್ತ, ಅವನನ್ನು ಒಳಗೆ ಕರೆದೊಯ್ದನು. ಉಳಿದ ಇಬ್ಬರು ವಂಚಕರೂ ಶಿಕ್ಷಿಸಲ್ಪಟ್ಟರು.

----

೫. ಹಿಟ್ಟು ಕದ್ದವರಾರು?

ಕಳ್ಳತನಗಳು ವಿಚಿತ್ರತರದಲ್ಲಿ ಪತ್ತೆಯಾಗುವುದುಂಟು; ಪೋಲೀಸರ ಬಳಿಗೆ ಹೋಗಿ ಅವರ ಸಹಾಯ ಯಾಚಿಸದೆಸೇ ಪತ್ತೆಯಾಗಿ, ಯಾರಿಗೂ

ತಿಳಿಯದಂತೆ ಎರಡೂ ಕಡೆಗಳವರಿಗೆ ತೃಪ್ತಿಕರವೆನಿಸುವಂತೆ ತೀರ್ಮಾನ ವಾಗುವುದೂ ಉಂಟು.

ಒಂದು ನಗರದ ಒಂದು ರಸ್ತೆಯಲ್ಲಿ ಜೀನಸುಗಳ ಮಾರಾಟದ ಅಂಗಡಿಯಿತ್ತು. ಆ ರಸ್ತೆಯಲ್ಲಿ ಆ ಅಂಗಡಿ ಒಂದೇ ಆಗಿತ್ತು. ಅಂಗಡಿ ಯವನಿಗೆ ಸಾಮಾನ್ಯವಾಗಿ ಆ ರಸ್ತೆಯಲ್ಲಿ ವಾಸಿಸಿರುವವರೆಲ್ಲರ ಪರಿಚಯವೂ ಇತ್ತು.

ಒಂದು ದಿನ ಬೆಳಿಗ್ಗೆ ಆ ಅಂಗಡಿಯವನು ಬಂದು ಬಾಗಿಲು ತೆರೆಯು ತ್ತಲೇ ಹಿಂಬದಿಯ ಕೊಠಡಿಯಲ್ಲಿ ಇರಿಸಿದ್ದ ಗೋದಿಹಿಟ್ಟಿನ ಗೋಣಿಯೊಂದು ಕಾಣೆಯಾಗಿದ್ದುದನ್ನು ಕಂಡನು. ಆ ಕೊಠಡಿಯಲ್ಲಿ ಅದೊಂದೇ ಗೋಣಿ ಯಿತ್ತು. ಹಿಂಬದಿಯ ಬಾಗಿಲಿನ ಚಿಲುಕ ತೆಗೆಯಲ್ಪಟ್ಟಿತ್ತು. ಕಳ್ಳನು ಎಲ್ಲಿಂದ ಬಂದನೆಂದು ನೋಡುತ್ತಿರಲಾಗಿ, ಅಂಗಡಿಯವನಿಗೆ, ಆ ಕೋಣೆಯ ಮಾಡಿನ ಕೆಲವು ಹಂಚುಗಳು ಸರಿಸಲ್ಪಟ್ಟುದೂ ಕಂಡುಬಂತು.

ಎರಡು ದಿನಗಳು ಕಳೆದುವು. ಆ ರಸ್ತೆಯಲ್ಲಿ ವಾಸಿಸಿರುವವರಲ್ಲೊ ಬ್ಬನು, ಆವೆರಡೂ ದಿನಗಳಲ್ಲಿ ಆ ಕಡೆ ಬಾರದಿದ್ದು, ಮೂರನೇ ದಿನ ಬರುತ್ತಲೇ, "ಏನು ಪುಟ್ಟಯ್ಯನವರೇ, ಮೊನ್ನೆ ನಿಮ್ಮ ಅಂಗಡಿಯಿಂದ ಹಿಟ್ಟೋ ಸಕ್ಕರೆಯೋ ಯಾವುದೋ ಕಳವಾಗಿ ಹೋಯಿತಲ್ಲ!" ಎಂದು ಮಾತು ತೆಗೆದನು.

ಅಂಗಡಿ ಪುಟ್ಟಯ್ಯನು, ಗಿರಾಕಿಯ ಮುಖನೋಡಿ, ತನ್ನ ಮೀಸೆ ಯುಜ್ಜಿಕೊಂಡು ಬಾಯಿಯನ್ನು ಸ್ವಚ್ಛ ಮಾತುಗಳಿಗೆ ಬಿಡಿಸಿಕೊಂಡು, ಹೇಳಿದನು: "ಸಕ್ಕರೆ ಹೋಗಲಿಲ್ಲ; ಒಳಗಿನ ಕೋಣೆಯಲ್ಲಿ ಭದ್ರವಾಗಿತ್ತು. ಹಿಟ್ಟಿನ ಒಂದು ಗೋಣಿ ಕಾಣೆಯಾಗಿದೆ."

"ಅಯ್ಯಯ್ಯೋ! ಹಿಟ್ಟೆಂದರೂ ಧರ್ಮಕ್ಕೆ ಬರುತ್ತದೆಯೆ? ನಿಮ್ಮ ಒಂದು ತಿಂಗಳ ಲಾಭದಷ್ಟನ್ನೆ ಆ ಕಳ್ಳ ಮುಂ....ಮಗ ಒಯ್ದನೆಂದೇ ಅರ್ಥ........ಕಳ್ಳನಾರೆಂದು ಪತ್ತೆಯಾಗಲಿಲ್ಲವೆ?"

ಪುಟ್ಟಯ್ಯನು ತಣ್ಣಗೆ ನುಡಿದನು: "ಆಗಿದೆ ಸ್ವಾಮಿ. ನೋಡಿ, ನನ್ನ ಅಂಗಡಿಯಿಂದ ಹಿಟ್ಟು ಕಳವಾಯಿತೆಂದು ನಾನು ಒಬ್ಬನೇ ಒಬ್ಬ ಪಿಳ್ಳೆ ಯೊಡನೆಯೂ ಹೇಳಿಲ್ಲ. ಈ ಗುಟ್ಟು ಈ ಜಗತ್ತಿನಲ್ಲಿ ಇಬ್ಬರಿಗೇ ಮಾತ್ರ

ಗೊತ್ತು,—ನನಗೂ ನಿಮಗೂ! ಈ ಗುಟ್ಟು ರಟ್ಟಾಗಬಾರದೆಂದು ನಿಮ್ಮ ಇಚ್ಛೆಯಿದ್ದರೆ, ನೀವು ಆ ಹಿಟ್ಟಿನ ಪೂರ್ತಿ ಕ್ರಯವನ್ನು ನನಗೆ ಸಲಾಯಿಸುವ ಶರ್ತದಲ್ಲಿ ನಾನು ಬಾಯಿಮುಚ್ಚಿಕೊಂಡಿರುತ್ತೇನೆ."

ಕಳವಾದ ಹಿಟ್ಟಿನ ಕ್ರಯವು ತೆರಲ್ಪಟ್ಟಿತು.

■■■■■■■■

೬. ಕುರುಡನ ಚಾತುರ್ಯ

ಒಬ್ಬ ಕುರುಡನೊಡನೆ ಐನೂರು ರೂಪಾಯಿಗಳಿದ್ದುವು. ಅವನು, ಅಷ್ಟು ಹಣವನ್ನು ತನ್ನ ಹರಕು ಮುರುಕು ಮನೆಯುಳ್ಳಿಡಲು ಸಂಕೋಚಪಟ್ಟು, ಕೊನೆಗೆ, ಮನೆ ಹಿಂಬದಿಯ ಅಂಗಳದಲ್ಲಿ, ಒಂದು ಮೂಲೆಯಲ್ಲಿ ಹೂಳಿಡಲು ನಿರ್ಧರಿಸಿದನು. ಮಳೆಯಿಂದ ನೆಲವು ಮೆತ್ತಗಾಗಿತ್ತು. ನೆರೆಕರೆಯುವರು ನೋಡಬಾರದೆಂದು ಆ ಕುರುಡನು, ನಡುರಾತ್ರೆ, ಮಳೆಯಿಲ್ಲದ ವೇಳೆ ನೋಡಿ, ಮೆಲ್ಲಗೆ ಅಂಗಳಕ್ಕಿಳಿದು, ಬಲು ಜಾಗರೂಕತೆಯಿಂದ ಹೊಂಡತೆಗೆದು, ಆ ಐನೂರು ರೂಪಾಯಿಗಳನ್ನಿರಿಸಿದ ಪಾತ್ರೆಯನ್ನು ಅದರಲ್ಲಿಟ್ಟು ಮಣ್ಣು ಮುಚ್ಚಿ, ಮರಳಿ ಬಂದು ಸ್ವಸ್ಥವಾಗಿ ಮಲಗಿದನು.

ನೆರೆಕರೆಯ ಮನೆಯವನು, ನಿದ್ದೆ ಬಾರದೆ ಹೊರಳಾಡುತಿದ್ದವನು, ಕುರುಡನ ಮನೆಯಂಗಳದಲ್ಲಿ ಮೆತ್ತಗೆ ನೆಲ ಅಗೆದಂತೆ ಶಬ್ದ ಕೇಳಿಸಿ, ಕುತೂಹಲದಿಂದ ಎದ್ದು ಬಂದು, ಗೋಡೆ ಮೇಲಿಂದ ಇಣಿಕಿ ನೋಡಿದನು. ಕುರುಡನು ಏನನ್ನೊ ಹೂತಿಡುವುದು ಕಾಣಿಸಿತು. ಕುರುಡನು ಹೊರಟು ಹೋದ ಮರುಕ್ಷಣದಲ್ಲೆ ಈ ಮಹಾಶಯನು ಗೋಡೆಹಾರಿ ಹೋಗಿ, ಮಣ್ಣು ಅಗೆದು ಕೈಗೆ ಹತ್ತಿದ ಹಣದ ಪಾತ್ರೆ ಹಿಡಿದುಕೊಂಡು, ಪುನಃ ಮಣ್ಣು ಹಾಕಿ, ಹೊರಟುಹೋದನು.

ಮರುದಿನ ರಾತ್ರೆ, ಕುರುಡನು ತಿರಿಗಿ ಬಂದು, ಅಂಗಳಕ್ಕಿಳಿದು, ಹಣದ ಪಾತ್ರೆ ಸುರಕ್ಷಿತವಿರುವುದೋ ನೋಡಲು ಆ ಸ್ಥಳದಲ್ಲಿನ ಮಣ್ಣು ತೆಗೆದಾಗ, ಪಾತ್ರೆಯು ಕಾಣೆಯಾದುದನ್ನು ಕಂಡನು. ಅವನ ಜೀವಮಾನದಲ್ಲಿನ ಉಳಿಕೆಯ ಹಣವೆಲ್ಲವೂ ಹೋಗಿತ್ತು!

ಕುರುಡನಿಗೆ,-ಕಳ್ಳನಾರಿರಬಹುದೆಂದು ಯೋಚನೆಹತ್ತಿತು. ಕೊನೆಗೆ, ನೆರೆಕರೆಯವರೇ ಇದನ್ನು ತಿಳಿಯಬಲ್ಲವನೆನಿಸಿತು. ತಾನು ನಡುರಾತ್ರೆ

ಅಗೆವಾಗ, ಆ ನೆರೆಕರೆಯವನು ಕಂಡಿರಬೇಕೆಂದು ನಿಶ್ಚಯಮಾಡಿದನು. ಮತ್ತು ಚೆನ್ನಾಗಿ ಆಲೋಚಿಸಿ, ಒಂದು ಉಪಾಯ ಹೂಡಿದನು.

ಮರುದಿನ ಆ ಕುರುಡನು, ಆ ನೆರೆಕರೆಯವನಲ್ಲಿಗೆ ಹೋಗಿ, ಪ್ರೇಮದಿಂದಲೂ ವಿಶ್ವಾಸದಿಂದಲೂ ಅವನ ಸಲಹೆ ಕೇಳಿದನು: "ಸ್ವಾಮಿ, ನನ್ನೊಡನೆ ಇರುವ ಒಂದುಸಾವಿರ ರೂಪಾಯಿಗಳಲ್ಲಿ ಐನೂರು ರೂಪಾಯಿಗಳನ್ನು ನಾನು, ಒಂದು ಕಡೆಯಲ್ಲಿ ನೆಲದೊಳಗೆ ಅಡಗಿಸಿಟ್ಟಿದ್ದೇನೆ. ಇನ್ನುಳಿದ ಐನೂರು ರೂಪಾಯಿಗಳನ್ನೂ ಅದಕ್ಕೇ ಸೇರಿಸಬೇಕೋ ಬೇಡವೋ ಎಂದು ನಿಮ್ಮ ಅಭಿಪ್ರಾಯ ಕೇಳಲಿಚ್ಛಿಸುತ್ತೇನೆ."

ನೆರೆಕರೆಯವನು, ಕೂಡಲೇ ಉತ್ತರವಿತ್ತನು: "ಓಹೋ, ಏನೂ ಯೋಚಿಸದೆ ನೆಲದೊಳಗೇ—ಅಲ್ಲೇ—ಹೂತಿಡುವುದೊಳ್ಳೆಯದು. ಮನೆಯೊಳಗೆ ಸರ್ವಥಾ ಬೇಡ. ಈಗಿನ ದಿನಗಳೇ ಕೆಟ್ಟುವು. ಅರ್ಧಾಣೆ ಸಿಕ್ಕುವುದಿದ್ದರೂ ಕನ್ನಕೊರೆವ ಶ್ರಮ ವಹಿಸುವ ಕಳ್ಳರಿದ್ದಾರೆ. ಹೂತಿಡಪ್ಪ, ಹೂತಿಡು! ಆ ಐನೂರು ಇಟ್ಟಲ್ಲೇ ಈ ಐನೂರನ್ನೂ ಇಟ್ಟುಬಿಡು!" ಎಂದನು.

ಕುರುಡನು ಹೊರಟುಹೋಗುತ್ತಲೇ, ನೆರೆಕರೆಯವನಿಗೆ ಹೀಗನಿಸಿತು: "ಈ ದಿನ ನಡುರಾತ್ರೆ ಈ ಪುಣ್ಯಾತ್ಮನು, ಇನ್ನೊಂದು ಐನೂರು ರೂಪಾಯಿಗಳಿಗೆ ಮಣ್ಣುಮುಚ್ಚಿಸುತ್ತಾನೆ. ಕುಳಿತಲ್ಲೆ ಇನ್ನೊಂದು ಐನೂರು ರೂಪಾಯಿ ಸಿಕ್ಕುತ್ತದೆ. ಆದರೆ, ಈ ಐನೂರು ತಂದುಹಾಕಲು ಅವನು ಮಣ್ಣುತೆಗೆದಾಗ, ತನ್ನ ಮೊದಲನೇ ಐನೂರು ಇರಿಸಿದ ಪಾತ್ರ ಕಾಣೆಯಾಗಿದೆಯೆಂದು ತಿಳಿವನಲ್ಲವೆ? ತಿಳಿದರೆ, ಮತ್ತೆ ಈ ಐನೂರನ್ನು ಅಲ್ಲಿ ಹಾಕಲುಂಟೇ? ಆದಕಾರಣ, ಮೊನ್ನೆ ರಾತ್ರೆ ನಾನು ತೆಗೆದ ಆ ಐನೂರರ ಪಾತ್ರೆಯನ್ನು ಈ ಒಂದು ರಾತ್ರೆಯ ಮಟ್ಟಿಗೆ ಅಲ್ಲೆ ಇರಿಸಿದರೆ, ಆ ಐನೂರು ಕೂಡಿದ ಮೇಲೆ ನಾನೇ ಎತ್ತಿ ತರಬಹುದು" ಎನ್ನುತ್ತ, ತಾನು ಕದ್ದೊಯ್ದ ಐನೂರನ್ನು, ಕತ್ತಲಾಗುತ್ತಲೇ ಕೊಂಡುಹೋಗಿ, ಮೊದಲನೇ ಸ್ಥಳದಲ್ಲೆ ಇರಿಸಿಬಿಟ್ಟನು.

ಹೀಗಾಗಬೇಕೆಂದೇ ಉಪಾಯ ಹೂಡಿದ್ದ ಕುರುಡನು, ಹಿಂಬದಿಯ ಅಂಗಳದ ಕಡೆಗೇ ಕಿವಿಗೊಟ್ಟು ಕುಳಿತಿದ್ದು, ಹೋದ ಹಣವು ತಿರಿಗಿ ಆ

ಸ್ಥಾನ ಸೇರಿತೆಂದು ತಿಳಿಯುತ್ತಲೇ ಎದ್ದುಹೋಗಿ, ಆ ಹಣವನ್ನು ತೆಗೆದು ಕೊಂಡು, ಸುರಕ್ಷಿತ ಸ್ಥಳಕ್ಕೆ ಹೊರಟುಹೋದನು. ನೆರೆಕರೆಯುವನಿಗೆ ಮಣ್ಣೇ ಆಯಿತು.

\-\-\-\-\-\-\-\-\-

೭. ಋಣ ಸಂದಾಯ

ಮಹಾಕೃಪಣನೊಬ್ಬನು ಬಸ್ಸಿನಲ್ಲಿ ಪ್ರಯಾಣಮಾಡುತಿದ್ದನು. ಅವನ ಬಳಿಯಲ್ಲಿ ಕುಳಿತ ಆಗಂತುಕನೊಬ್ಬನು ಆ ಕೃಪಣನನ್ನೆ ಎವೆಯಿಕ್ಕದೆ ನೋಡಿದನು.

ಕೃಪಣನು ಕೆಲವು ಕ್ಷಣಗಳ ನಂತರ, ಆಗಂತುಕನ ನೆಟ್ಟದೃಷ್ಟಿಯಿಂದ ತುಸು ಅಸ್ವಸ್ಥಚಿತ್ತನಾಗಿ, "ನನ್ನನ್ನೆ ನೋಡುತ್ತಿರುವಿರೇನು?" ಎಂದು ಪ್ರಶ್ನಿಸಿದನು.

ಆಗಂತುಕನು ಕೂಡಲೇ ನಗುಮೊಗದಿಂದ, "ಕ್ಷಮಿಸಿರಿ ಸ್ವಾಮಿ. ನಿಮ್ಮನ್ನು ಏಳು ವರ್ಷಗಳ ಹಿಂದೆ ಉಡುಪಿಯಲ್ಲಿ ನೋಡಿದ್ದೆ ಎಂದು, ಈಗ ನಿಮ್ಮನ್ನು ಕಾಣುತ್ತಲೇ ನೆನಪಾಯಿತು." ಎಂದನು.

ಕೃಪಣನು ಉಡುಪಿಗೆ ಎಂದೋ ಒಮ್ಮೆ ಹೋಗಿದ್ದನಷ್ಟೆ. ಏಳು ವರ್ಷಗಳ ಹಿಂದೆ ಹೋಗಿರಲಿಲ್ಲ. ಅವನು ಮನೆಬಿಟ್ಟು ಪರವೂರುಗಳಿಗೆ ಪ್ರಯಾಣಹೋಗುವವನಾಗಿರಲಿಲ್ಲ. ಆದರೂ, "ನೋಡಿದ್ದರೆ ಅದರಲ್ಲೇನು ಮಹತ್ವ?" ಎಂದು, ನೊಂದ ನುಡಿಯಲ್ಲಿ ಕೇಳಿದನು.

ಆಗಂತುಕನು ಅತ್ಯಂತ ವಿನೀತಭಾವದಿಂದಲೂ ಗೌರವದಿಂದಲೂ, "ಹಾಗಲ್ಲ ಸ್ವಾಮೀ. ಅಂದು ನನಗೆ ನೀವು, ಹೊಟೇಲಿನ ಬಾಗಿಲಿನಲ್ಲಿ ಎದುರಾದಾಗ, ನನ್ನ ಬಾಡಿದ ಮೋರೆ ಕಂಡು, ಕರುಣೆಯಿಂದ ನನ್ನ ಯೋಗ ಕ್ಷೇಮ ವಿಚಾರಿಸಿ ನಾಲ್ಕಾಣೆ ಕೊಟ್ಟಿರಿ. ನಿಮಗೆ ನೆನಪಿರಬಹುದು!" ಎಂದನು.

ಕೃಪಣನಿಗೆ, ತಾನು ತನ್ನ ಜನ್ಮದಲ್ಲಿ ಒಂದು ದಿನವಾದರೂ ಇಂಥ ಔದಾರ್ಯ ಪ್ರದರ್ಶಿಸಿರದಿದ್ದರೂ, ಪುಕ್ಕಟೆಯಾಗಿ ಈಗ ಕೀರ್ತಿದೊರೆಯು ತ್ತಿರುವುದು ಸಂತೋಷವನ್ನುಂಟುಮಾಡಿತು. ಕೂಡಲೇ, ಮುಗುಳ್ನಗೆ

ಯಿಂದ, ನಾಚುತ್ತ ನಾಚುತ್ತ, "ಇರಬಹುದು. ಏನೋ ಅಲ್ಪಸ್ವಲ್ಪ ಕೊಟ್ಟೆ........" ಎಂದು ತೊದಲ್ನುಡಿದನು.

ಆಗಂತುಕನು ಅವನನ್ನು ತಡೆಯುತ್ತ, "ಛೀ ಛೀ! ಹಾಗನ್ನಬಾರದು! ಎರಡು ದಿನಗಳಿಂದ ಅನ್ನವಿಲ್ಲದೆ ಅಂದು ನಾನು ಬರುತ್ತಿರುವಾಗ, ನನ್ನ ಸ್ಥಿತಿಯನ್ನು ದಿವ್ಯದೃಷ್ಟಿಯಿಂದ ತಿಳಿದವರಂತೆ ಆ ನಾಲ್ಕಾಣೆ ಕೊಟ್ಟಿರಿ. ಪರಮಾತ್ಮನೇ ನಿಮ್ಮ ವೇಷಧರಿಸಿ ಬಂದು ನನ್ನನ್ನುಳಿಸಿದನೆಂದು ನೆನಸಿ, ನನ್ನ ಕಣ್ಣುಗಳಿಂದ ಧರಧರನೆ ನೀರಿಳಿಯಿತು. ಸ್ವಾಮಿ, ಯಾರಿಗೂ ಗೊತ್ತಿಲ್ಲದ ಒಂದು ವಿಷಯವನ್ನು ಹೇಳುತಿದ್ದೇನೆ—ನಾನು ಆ ದಿನ, ಜೀವನ ದಲ್ಲಿ ಜುಗುಪ್ಸೆಗೊಂಡು, ಆತ್ಮಹತ್ಯಮಾಡಿಕೊಳ್ಳಲು ಹೋಗುತಿದ್ದೆ. ನಿಮ್ಮ ನಾಲ್ಕಾಣೆ ಪಾವಲಿ ಸಿಗದಿದ್ದರೆ ಈ ಜೀವವು ಅಂದೇ........" ಮುಂದೆ ಆಗಂತುಕನ ಬಾಯಿಯಿಂದ ಮಾತು ಹೊರಡಲು ಕಷ್ಟವಾಯಿತು. ಕಂಠವು ಬಿಗಿದುಕೊಂಡಿತು. ಕಣ್ಣುಗಳು ತುಂಬಿಬಂದುವು.

ಈ ಜೀವವುಳಿದುದಕ್ಕೆ ಲವಲೇಶ ಆನಂದಪಡದೆ ಕೃಪಣನು, ತಾನು ಈ ಪ್ರಾಣದಾನಮಾಡಿರದಿದ್ದರೂ ಮಿಥ್ಯವಾಗಿಯಾದರೂ ಈ ಗೌರವವು ತನಗೆ ಬಂತೆಂದು ಮಹದಾನಂದ ಹೊಂದಿ, "ದೇವರು ದೊಡ್ಡವನು. ನಾವು ಮನುಷ್ಯಮಾತ್ರರು. ತನ್ನ ಸಹಜೀವಿಗೆ ಒಂದು ನಾಲ್ಕಾಣೆ ಪಾವಲಿ ಕೊಡಲಾರದ ಈ ನರಜನ್ಮವೇತಕ್ಕೆ!" ಎಂದು, ತನ್ನ ಕ್ರೂರಕಣ್ಣುಗಳಲ್ಲಿ ಸಾಧ್ಯವಿದ್ದಷ್ಟು ಕರುಣೆಯನ್ನು ತುಂಬಿಕೊಳ್ಳಲು ಯತ್ನಿಸಿದನು.

ಆಗಂತುಕನು ಕರವಸ್ತ್ರವನ್ನು ಒಮ್ಮೆ ಕಣ್ಣುಗಳಿಗೊತ್ತಿ, ಆ ಮೇಲೆ ಮೂಗಿಗೊಯ್ದು ದೊರಗು ಕಾಗದವನ್ನು ಫಕ್ಕನೆ ಹರಿದಂತೆ ಶಬ್ದಮಾಡಿ, "ನಿಮ್ಮ ವಿಶಾಲಮನೋವೃತ್ತಿ—ಮೃದುಹೃದಯ—ಹಾಗನ್ನುತ್ತಿದೆ. ನಾನು ಮಾತ್ರ ಏಳೇಳು ಜನ್ಮಗಳಲ್ಲಿಯೂ ಇದನ್ನು ಮರೆಯಲಾರೆ........ಸ್ವಾಮಿ, ಸಾಕ್ಷಾತ್ ಪರಮಾತ್ಮನಂಥ ನಿಮ್ಮೊಡನೆ ಮುಚ್ಚುಮರೆಯೇಕೆ? ಅಂದು ನಿಮ್ಮ ನಾಲ್ಕಾಣೆಯಿಂದ ಬದುಕಿಕೊಂಡುದರಿಂದ, ಒಂದೇ ಸವನೆ ನನ್ನ ಅದೃಷ್ಟಚಕ್ರವು ತಿರುಗಿ, ನನಗೆ ಹೇರಳ ಸಂಪಾದನೆಯೂ ಆಗಿ, ಖರ್ಚು ಕಳೆದು ಇಂದು ಹೆತ್ತಿಪ್ಪತ್ತು ಸಾವಿರ ರೂಪಾಯಿ ಉಳಿಸಿಕೊಳ್ಳಲು ಸಮರ್ಥ ನಾದೆ. ನೈತಿಕವಾಗಿ ನಿಮ್ಮ ಋಣ ತೀರಿಸಲಾರೆ. ಆದರೆ, ನಾವು ವಾಸ್ತ

ವಿಕ ಪ್ರಪಂಚವನ್ನೂ ನೋಡಬೇಕು. ನನ್ನಂಥ ನೂರಾರು ಮಂದಿಗಳನ್ನು ಉಳಿಸಲು ನಿಮ್ಮಂಥವರನ್ನು ಪರಮಾತ್ಮನು ಹುಟ್ಟಿಸಿರುವನು. ನಾನು ಹಣದ ರೂಪದಲ್ಲಿ ನಿಮ್ಮ ಋಣವನ್ನು ಬಡ್ಡಿ-ಮಾರ್ಬಡ್ಡಿಗಳಿಂದ ಸಲಿಸಲೇಬೇಕು — ಈಗ ಸಲಿಸದಿದ್ದರೆ ಮತ್ತಾವಾಗ?............ತಕ್ಕೊಳ್ಳಿ – ಒಂದು ರೂಪಾಯಿ!'' ಎನ್ನುತ್ತ, ಐದು ರೂಪಾಯಿಗಳ ಒಂದು ನೋಟನ್ನು ಕಿಸೆಯಿಂದ ತೆಗೆದು, ಕೃಪಣನಿಗೆ ಕೊಡಲುಹೋದನು.

ಕೃಪಣನಿಗೆ ರೋಮಾಂಚನವಾಯಿತು. ಸುಮ್ಮನೆ ಕುಳಿತಲ್ಲಿ, ಒಂದು ರೂಪಾಯಿ! ಜಗತ್ತು ಎಷ್ಟು ಮೂರ್ಖ!

"ಛೀ—ಬೇಡ ಸ್ವಾಮಿ!'' ಎಂದು ನಾಚುತ್ತ, ಕೃಪಣನು ಐದರ ನೋಟಿನ ಕಡೆಗೆ ಬೆರಳುಗಳನ್ನು ಕುಣಿಸಿದನು.

"ಬಿಡಲಾರೆ—ನೀವು ತೆಗೆದುಕೊಳ್ಳದೆ ಬಿಡೆ!'' ಎಂದು, ಧೀರ-ಗಂಭೀರಸ್ವರದಿಂದ ಆ ಆಗಂತುಕನು ಐದರ ನೋಟನ್ನು, ಕೃಪಣನು ತೆರೆದ ಅಂಗೈಯಲ್ಲಿಟ್ಟು, "ನಾಲ್ಕಾಣೆಗಳಿಗೆ ನಾಲ್ಕು ಪಾಲಷ್ಟು ಮರುಪಾವತಿಯೇ? ಎಂದು ದುಃಖಿಸಬೇಡಿರಿ! ಯಾರಿಗೆ ಗೊತ್ತು,—ಈ ರೂಪಾಯಿಗಳಲ್ಲಿನ ನಾಲ್ಕು ಚವಲಗಳಿಂದ ನೀವು ಇನ್ನು ನಾಲ್ಕು ಪ್ರಾಣಗಳನ್ನು ಉಳಿಸಲಾರಿರೆಂದು!'' ಎನ್ನುತ್ತಿರಲು,—

ತನ್ನ ಆನಂದಕ್ಕೆ ಪಾರವೇ ಇಲ್ಲದ ಆ ಕೃಪಣನು, ತನ್ನ ಕಂಠವೂ ಬಿಗಿದುಬಂದು, ಸಂತೋಷದಿಂದ ಕೈಗಳು ನಡುಗಿ, ಆ ಐದರ ನೋಟನ್ನು ತನ್ನ ಕಿಸೆಗೆ ತುರುಕಿ, ನಾಲ್ಕು ರೂಪಾಯಿಗಳನ್ನು ಆ ಆಗಂತುಕನಿಗೆ ಒಂದೆ ಕೊಟ್ಟು, ಕೃತಜ್ಞತೆಯಿಂದ ಅವನ ಕೈಗಳನ್ನು ಒತ್ತಿ, ತಾನು ಇಳಿವಂಥ ಸ್ಥಳವು ಬರಲು, ಇಳಿದುಹೋದನು.

ಮನೆಗೆ ಹೋಗಿ ನೋಡಿದಾಗ, ಆಗಂತುಕನು ಕೊಟ್ಟಿದ್ದ ಐದರ ನೋಟು ಠಕಾರಿ ನೋಟು ಆಗಿತ್ತು!

To make a long Story



SHORT

ಸುದೀರ್ಘ ಗೋಷ್ಟಿಯನ್ನು ಸಂಕ್ಷಿಪ್ತಗೊಳಿಸುವುದಾದರೆ ....

—ಅಹುದು. ನಿಮ್ಮ ಮಗುವು ಹಣವುಳಿಸುವಂತೆ, ಉಳಿಸಿದಷ್ಟನ್ನು ಸೇವಿಂಗ್ಸ್ ಬೇಂಕ್ ಖಾತೆಯಲ್ಲಿ ಠೇವಣೆಯಿರಿಸುವಂತೆ, ಆ ಮಗುವಿಗೆ ಕಲಿಸಬಲ್ಲಿರಾದರೆ, ನಿಮ್ಮ ಮಗುವನ್ನು ನೀವು ಊಹಿಸಿದ್ದಕ್ಕಿಂತಲೂ ಅಲ್ಪಾವಧಿಯಲ್ಲಿ ಸಾರ್ಥಕ್ಯಕ್ಕೂ ಸೌಭಾಗ್ಯ ಸಂತೋಷಗಳಿಗೂ ಕರೆದೊಯ್ಯಬಲ್ಲಿರಿ.

ಚಲಾವಣೆ ಬಂಡವಾಲ ರೂ. 6,50,00,000.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

THE CANARA INDUSTRIAL & BANKING SYNDICATE Ltd

ESTD. 1925

H.O. UDIPI (S.I.) HOMJI St. BOMBAY

Edited, Printed & Published by K. V. Shenoy
at The Prabhat Printers, Ltd., Mangalore.